<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಸುರಪುರ.</u>

**<u>ಸಿ.ಸಿ. ನಂ.299/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃಶರಬಣ್ಣ | | ಪಿ.ಡಬ್ಲ್ಯೂಃ 3 |
| ತಂದೆ ಹೆಸರು | ಃಹಣಮಂತ್ರಾಯ | | ಸಿ.ಡಬ್ಲ್ಯೂಃ 6 |
| ವಯಸ್ಸು | ಃ54 ವರ್ಷ | | |
| ವೃತ್ತಿ | ಃಎ.ಎಸ್.ಐ ಬಿ.ಗುಡಿ ಠಾಣೆ | | |
| ವಾಸ ಸ್ಥಳ | ಃಬಿ.ಗುಡಿ | ದಿನಾಂಕ | ಃ03.03.2026 |

<u>ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು</u>

ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ

ನಾನು 2021 ರಿಂದ 2022 ರವರೆಗೆ ಕೆಂಭಾವಿ ಪೋಲಿಸ ಠಾಣೆಯಲ್ಲಿ ಮುಖ್ಯಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 07-12-2021 ರಂದು ನಾನು ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿ ಇದ್ದಾಗ ಮದ್ಯಾಹ್ನ 1 ಗಂಟೆಗೆ ಚಾಸಾ-1 ರವರು ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಕೆಂಭಾವಿ ಪೋಲೀಸ ಠಾಣಾ ಗುನ್ನೆ ನಂ.174/2021 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ನಾನು ಈಗ ನೋಡುತ್ತಿರುವ ದೂರಿನಲ್ಲಿರುವ ಸಹಿ ನನ್ನದೇ ಇದ್ದು, ಸದರಿ ದೂರನ್ನು ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯಲ್ಲಿರುವ ಸಹಿ ನನ್ನದೆ ಇರುತ್ತದೆ, ಸದರಿ ಪ್ರ.ವ.ವರದಿಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ದಿನಾಂಕ 07-12-2021 ರಂದು ಚಾಸಾ-1 ರವರ ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 3.30 ರಿಂದ 4.40 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ಪಂಚನಾಮೆ ಈಗಾಗಲೇ ನಿಪಿ-1 ಎಂದು ಗುರುತಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ

ಪಂಚನಾಮೆ ಕಾಲಕ್ಕೆ ಒಂದು ಹಿಡಿಗೈ ಗಾತ್ರದ ಕಲ್ಲನ್ನು ಜಪ್ತು ಪಡಿಸಿಕೊಂಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ಗುರುತಿಸುತ್ತೇನೆ. ಅದನ್ನು ಎಂ.ಓ 1 ಎಂದು ಗುರುತಿಸಲಾಗಿರುತ್ತವೆ. ನಂತರ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ತನಿಖೆ ಮುಕ್ತಾಯವಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸುತ್ತೇನೆ.

<u>ಪಾಟೀ ಸವಾಲು ಃ **2 ಮತ್ತು 3 ನೇ** ಆರೋಪಿತರ ಪರ ಶ್ರೀ ಎಸ್.ಎ ವಕೀಲರಿಂದ ಃ</u>

ಪಿರ್ಯಾದಿಯನ್ನು ನಾನು ಪರಿಶೀಲಿಸಿ ದೂರನ್ನು ತೆಗೆದುಕೊಂಡಿರುತ್ತೇನೆ. ದೂರಿನಲ್ಲಿ ದಿನಾಂಕ 06-08-2021 ರಂದು ಘಟನೆ ಆಗಿದೆ ಎಂದು ನಮೂದಿಸಿರುವುದು ಸರಿ ಇರುತ್ತದೆ. ನಾನು ದಿನಾಂಕ 07-08-2021 ರಂದು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿ. ನಾನು ಸುಳ್ಳು ಪಿರ್ಯಾದಿಯನ್ನು ಆಧರಿಸಿ ಪ್ರಕರಣ ದಾಖಲಿಸಿಕೂಂಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 07-12-2021 ರಂದು ಚಾಸಾ-1 ರವರ ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿ ಪಂಚನಾಮೆ ಕಾಲಕ್ಕೆ ಕಲ್ಲನ್ನು ಜಪ್ತು ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪಿರ್ಯಾದಿ ಆಧರಿಸಿ ಸುಳ್ಳು ಪ್ರಕರಣ ದಾಖಲಿಸಿಕೊಂಡು ಅದರ ಆಧಾರದ ಮೇರೆಗೆ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇರೀತಿ ಚಾಸಾ-1 ಇವಳು ಆರೋಪಿತರ ಮೇಲೆ ಆರೋಪಿತರ ಮೇಲೆ ಮೂರು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ.

<u>ಪಾಟೀ ಸವಾಲು ಃ **1 ನೇ** ಆರೋಪಿತರ ಪರ ಶ್ರೀ ಎಸ್.ಕೆ ಎನ್ ವಕೀಲರಿಂದ ಃ</u>

ಘಟನಾ ಸ್ಥಳದಲ್ಲಿ ಬಿಳಿ ಕಲ್ಲು ಸಿಗುತ್ತವೆ, ನ್ಯಾಯಾಲಯದ ಮುಂದೆ ಇರುವ ಕಲ್ಲು ಸಿಗುವುದಿಲ್ಲ

ಎಂದರೆ ಸರಿಯಲ್ಲ. ನಾವು ಮೇಲಾಧಿಕಾರಿಗಳ ಮಾತು ಕೇಳಿ ರಾಜಕೀಯ ಒತ್ತಾಯದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ಕುಳಿತು ಪಂಚನಾಮೆ ತಯಾರಿಸಿ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡು ಸುಳ್ಳು ದೋಷಾರೋಪಣಾ ಪಟ್ಟಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ 4 ಮತ್ತು 5 ನೇ ಆರೋಪಿತರ ಪರ ಶ್ರೀ ಎಂ.ಎ.ಎಸ್ ವಕೀಲರಿಂದ ಃ</u>

1 ರಿಂದ 3 ನೇ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ.

<u>(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)</u>

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಸುರಪುರ.